ಆ) 2014–15ನೇ ಸಾಲಿನ ಆಯವ್ಯಯದಲ್ಲಿ ಮಡಿಕೇರಿ ಜಿಲ್ಲಾರಂಗ ಮಂದಿರಕ್ಕೆ ರೂ. 150.00 ಲಕ್ಷಗಳನ್ನು ಒದಗಿಸಲಾಗಿದೆ.

ಸಾಹಿತ್ಯ ಅಕಾಡೆಮಿಗಳಿಗೆ ಅನುದಾನ

194(592); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸಾಹಿತ್ಯ ಅಕಾಡೆಮಿಗಳು ಇವೆ (ವಿವರ ಒದಗಿಸುವುದು);

ಆ) ಕಳೆದ 3 ವರ್ಷಗಳಲ್ಲಿ ಈ ಅಕಾಡೆಮಿಗಳಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ (ಪ್ರತ್ಯೇಕ ವಿವರ ಒದಗಿಸುವುದು);

ಇ) ಈ ಅವಧಿಯಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು;

ಈ) ಎಲ್ಲಾ ಅನುದಾನವನ್ನು ಆಯಾ ವರ್ಷ ಖರ್ಚು ಮಾಡಲಾಗಿದೆಯೇ; ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು (ಪ್ರತ್ಯೇಕವಾದ ವಿವರ ಒದಗಿಸುವುದು)?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ರಾಜ್ಯದಲ್ಲಿ 6 ಸಾಹಿತ್ಯ ಅಕಾಡೆಮಿಗಳಿವೆ.

1. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
2. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ
3. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
4. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು

5. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು

6. ಕರ್ನಾಟಕ ಅರೆಭಾಷಾ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಂಗಳೂರು

ಆ) ಮತ್ತು ಇ) ಅನುಬಂಧ–1ರಲ್ಲಿ ನೀಡಲಾಗಿದೆ.

ಈ) ಅಕಾಡೆಮಿಯ ಅಧ್ಯಕ್ಷರು, ಸದಸ್ಯರು ನಾಮ ನಿರ್ದೇಶನವಾಗದ ಕಾರಣ ಬಿಡುಗಡೆ ಮಾಡಲಾದ ಎಲ್ಲಾ ಅನುದಾನವನ್ನು ಆಯಾ ವರ್ಷ ವೆಚ್ಚ ಮಾಡಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಅಕಾಡೆಮಿಗಳಿಗೆ ಅರಕ್ಷರು, ಸದಸ್ಯರನ್ನು ನಾಮ ನಿರ್ದೇಶನ ಮಾಡಿದ್ದು, ಸದರಿ ಅಕಾಡೆಮಿಗಳು ಸರ್ವ ಸದಸ್ಯರ ಸಭೆ ನಡೆಸಿ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಾನುಷ್ಠಾನ ಮಾಡಲು ಕ್ರಮ ಕೈಗೊಂಡಿರುತ್ತಾರೆ.

ಅಕಾಡೆಮಿಗಳು ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಅನುಬಂಧ-1

ಕಳೆದ ಮೂರು ವರ್ಷಗಳಲ್ಲಿ ಅಕಾಡೆಮಿಗಳಿಗೆ ಅನುದಾನ ಬಿಡುಗಡೆ ಮಾಡಿರುವ ವಿವರ

ಕ್ರ.ಸಂ	ಅಕಾಡೆಮಿಯ ಹೆಸರು	2012-13	2013-14	2014-15
1.	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು	64,13,000	77,10,000	1,18,00,000
2.	ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ	54,04,896	45,00,000	68,00,000
3.	ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು	51,39,580	51,26,540	1,71,76,120
4.	ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು	45,13,000	45,00,000	60,00,000
5.	ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು	54,02,040	54,79,038	68,20,000
6.	ಕರ್ನಾಟಕ ಅರೆಭಾಷಾ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಂಗಳೂರು	25,75,000	1,50,00,000	45,00,000

ಅನುಬಂಧ-2

ಅಕಾಡೆಮಿಗಳು ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ

1. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
   - ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೂಲಕ ಹುಲಿಮನೆ ಸೀತರಾಮಶಾಸ್ತ್ರಿಯವರ ಸಮಗ್ರ ನಾಟಕಗಳ ಸಂಪುಟಗಳ ಮುದ್ರಣ, ವಿಚಾರ ಸಂಕಿರಣ ಹಾಗೂ ನಾಟಕ ಪ್ರದರ್ಶನ
   - ಪ್ರೊ. ಆರ್.ಗುರುರಾಜರಾಯರ ಜನ್ಮಶತಮಾನೋತ್ಸವ, ಕವಿ ದಾರ್ಶನಿಕ ಪತ್ರಕರ್ತ ಜಿಂತಕ ಡಾ|| ಡಿ.ವಿ.ಗುಂಡಪ್ಪ ಜನ್ಮದಿನಾಚರಣೆ, ಮಂಕುತಿಮ್ಮನಕಗ್ಗ ವಾಚನ, ವ್ಯಾಖ್ಯಾನ ನೃತ್ಯ ನಾಟಕ ಪ್ರದರ್ಶನ, ಧಾರವಾಡ ಸಾಹಿತ್ಯ ಸಂಭ್ರಮ ವಿಚಾರ ಸಂಕಿರಣ, ಕೊಡಗಿನ ಗೌರಮ್ಮ ಜನ್ಮಶತಮಾನೋತ್ಸವ ವಿಚಾರ ಸಂಕಿರಣ ನಾಟಕ ಪ್ರದರ್ಶನ
   - ಶ್ರೀ ಎಚ್.ಎಸ್.ವಿ ಸಾಹಿತ್ಯ ಸಂಭ್ರಮ, ಜಿ.ಎಸ್.ಎಸ್ ನುಡಿನಮನ, ಕಾವ್ಯ ರಸ ಗ್ರಹಣ ಶಿಬಿರ
   - ಕಾವ್ಯ ಕಮ್ಮಟ, ವಸಂತ ಸಮಭ್ರಮ, ಸಾಧನೆಯರೊಂದಿಗೆ ಸಂವಾದ, ಗೌರೀಶ ಕಾಯ್ಕಿಣಿ ಜನ್ಮಶತಮಾನೋತ್ಸವ, ಯಶವಂತ ಚಿತ್ತಾಲ ನುಡಿ ನಮನ, ಬೆಳಗೆರೆ ಜಾನಕಮ್ಮ ಜನ್ಮ ಶತಮಾನೋತ್ಸವ, ಬೀಚಿಯವರ ಜನ್ಮಶತಮಾನೋತ್ಸವ, ಸುವರ್ಣ ಸಂಭ್ರಮ, ಸೇರೆಮನೆ ಸಾಹಿತ್ಯ ಮತ್ತು ವಿಚಾರ ಸಂಕಿರಣ, ಮಹಿಳೆ ಲಿಂಗ ಧಾರ್ಮಿಕಾರಣ, ಅನಂತ ನೆನಪು, ಹರ್ಡೇಕರ್ ಮಂಜಪ್ಪನವನ ಶ್ರಾವಣ ಮಾಸದ ಉಪನ್ಯಾಸ ಮಾಲೆಯ ಶತಮಾನೋತ್ಸವ
   - ದೇವಯ್ಯ ಹರವೆ ಬರಹ ಮತ್ತು ಒಡನಾಡ ವಿಚಾರ ಸಂಕಿರಣ, ಕವಿಗೋಷ್ಠಿ, ಕಾಲೇಜು ವಿದ್ಯಾರ್ಥಿಗಳಿಗೆ ರಸಗ್ರಹಣ, ಗೌರವ ಪ್ರಶಸ್ತಿ, ಪುಸ್ತಕ ಬಹುಮಾನ ಇತ್ಯಾದಿ

2. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
   - ಉತ್ಸವಗಳು, ಸಮ್ಮೇಳನಗಳು
   - ಸಂಶೋಧನಾ ಪ್ರಬಂಧಗಳಿಗೆ ಫೆಲೋಶಿಪ್
   - ತರಬೇತಿ ಕಮ್ಮಟಗಳು:-
   - ಹೊರಜಿಲ್ಲೆಗಲ್ಲಿ ತುಳು ಕಾರ್ಯಕ್ರಮಗಳು
   - ಹೊರರಾಜ್ಯಗಳಲ್ಲಿ ತುಳು ಕಾರ್ಯಕ್ರಮಗಳು
   - ತುಳುವೇತರರಿಗೆ ತುಳು ಕಲಿಕಾ ತರಗತಿಗಳು
   - ತುಳು ಲೇಖಕರಿಗೆ ಪುಸ್ತಕ ಪ್ರಕಟಣೆಗೆ ಧನಸಹಾಯ
   - ಲೇಖಕರಿಂದ ಪುಸ್ತಕಗಳ ಸಗಟು ಖರೀದಿ.
   - ಪರಿಶಿಷ್ಟ ಜಾತಿ / ಪಂಗಡಗಳ ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ
   - ಶಾಲಾ ಕಾಲೇಜುಗಳಲ್ಲಿ ಮತ್ತು ಸಾಂಪ್ರದಾಯಿಕ ಹಬ್ಬಗಳ ಆಚರಣೆ, ಜಾನಪದ ಕಲೆಗಳಿಗೆ ಪ್ರೋತ್ಸಾಹ
   - ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ತುಳು ಪಠ್ಯ ಜಾರಿಗೆ ಪ್ರಯತ್ನ

3. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು

- ಬ್ಯಾರಿ ಅಕಾಡೆಮಿಯ ಮುಂದಿನ ಪೆಜ್ಜೆಗಳು ಕುರಿತ ಸಂವಾದ, ಸಾಹಿತ್ಯ ಸಂಜೆ ಮತ್ತು ಬಹುಭಾಷಾ ಕವಿಗೋಷ್ಠಿ, ಪರ್ಸಾಲ್ ಸಂಘೊಲಾ ಕಾರ್ಯಕ್ರಮ, ಬ್ಯಾರಿ ಜಾನಪದ ಜಾಥಾ, ಗೌರವ ಪ್ರಶಸ್ತಿ ಸಮಾರಂಭ, ಕಲಾಸ್ಪರ್ಧೆ
- ಹಳ್ಳಿ ಹಿಗ್ ಬ್ಯಾರಿ ಸಂವಲ್, ಈದ್ ಮಿಲನ್ ಪ್ರತಿಭಾ ಸೌಹರ್ದ ಸಂವೇಶೋತ್ಸವ
- ಸಾರ್ವಜನಿಕ ವದಗ್ರಹಣ ಸಮಾರಂಭ, ಬ್ಯಾರಿ ಅಕಾಡೆಮಿ ಮತ್ತು ಭವಿಷ್ಯದ ಹೆಜ್ಜೆಗಳು
- ಬ್ಯಾರಿ ಸಾಹಿತ್ಯ & ಸಾಂಸ್ಕೃತಿಕ ಮೇಳ, ಗೌರವ ಪ್ರಶಸ್ತಿ, ವಿಶೇಷರ ಸಾಹಿತ್ಯ ಸಮಾಗಮ, ಬ್ಯಾರಿ ಸಮಾಗಮ ಸಾಹಿತ್ಯ & ಸಾಂಸ್ಕೃತಿಕ ಮೇಳ
- ಬ್ಯಾರಿ ಭಾಷಾ ಶಿಕ್ಷಕರ ದಿನಾಚರಣೆ
- ಗಡಿನಾಡ ಬ್ಯಾರಿಗಳ ಸಾಂಸ್ಕೃತಿಕ ಕಾರ್ಯಾಗಾರ ಹಾಗೂ ಬ್ಯಾರಿ ಸಾಹಿತ್ಯ ಅಕಾಡೆಮಿ ಮತ್ತು ಪತ್ರಕರ್ತರ ಸಮಾಲೋಚನೆ, ಬ್ಯಾರಿ ಭಾಷಾ ದಿನಾಚರಣೆ
- ಬ್ಯಾರಿ ಕನ್ನಡ- ಇಂಗ್ಲಿಷ್ ಶಬ್ದ ಕೋಶ ರಚನೆಗೆ ಚಾಲನೆ, ಸಂಸ್ಕೃತಿ ಮತ್ತು ಸಮಾಜ ವಿಚಾರ ಗೋಷ್ಠಿ.

4. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು

- ಕೊಂಕಣಿ ನಾಟಕ ಪ್ರದರ್ಶನ- ಪ್ರಾಯೋಜನೆ, ಕೊಂಕಣಿ ಶಿಕ್ಷಕರ ಸಮಾವೇಶ, ಕೊಂಕಣಿ ಸ್ಪರ್ಧೆಗಳಿಗೆ ಪ್ರಾಯೋಜನೆ, ರಜಾ ಶಿಬಿರ, ಮಂತ ಸಂಭ್ರಮ
- ಕೊಂಕಣಿ ಸಾಂಸ್ಕೃತಿಕ ಕಾರ್ಯಕ್ರಮ, ಪುಸ್ತಕ ಬಿಡುಗಡೆ, ಗಿಂಡಿ ನೃತ್ಯ ತರಬೇತಿ, ಕನಕ ಪ್ರಶಸ್ತಿ, ಕಾರ್ಯಕ್ರಮ, ಮೊಬೈಲ್ ಬಜಾರ ಉದ್ಘಾಟನೆ,
- ಅಕಾಡೆಮಿ ಗೌರವ ಪ್ರಶಸ್ತಿ,, ಪುಸ್ತಕ ಬಹುಮಾನ ಮತ್ತು ಯುವ ಪುರಸ್ಕಾರ, ಶಿಕ್ಷಕರ ತರಬೇತಿ ಕಾರ್ಯಕ್ರಮ, ಜಾನಪದ ಕಾರ್ಯಾಗಾರ
- ಕೊಂಕಣಿ ಸಂಭ್ರಮ ದೆಹಲಿಯಲಿ,,, ಮಾನ್ಯತ ದಿನಾಚರಣೆ, ಉಡುಪಿ ಜಿಲ್ಲಾ, ಕೊಂಕಣಿ ವಿದ್ಯಾರ್ಥಿ ಸಮ್ಮೇಳನ, ಮೈಸೂರು ದಸರಾದಲ್ಲಿ,, ಕೊಂಕಣಿ ಅಕಾಡೆಮಿ ಪುಸ್ತಕ ಪ್ರದರ್ಶನ
- ಮಂಗಳೂರು ದಸರಾದಲ್ಲಿ,, ಕೊಂಕಣಿ ಸಾಂಸ್ಕೃತಿಕ ಕಾರ್ಯಕ್ರಮ, ಕನ್ನಡ ಕೊಂಕಣಿ ಸಾಮರಸ್ಯ ಲೋಕ ಕಾರ್ಯಕ್ರಮ,
- ಆಳ್ವಾಸ್ ನುಡಿಸಿರಿಯಲ್ಲಿ, ಕೊಂಕಣಿ ಕಾರ್ಯಕ್ರಮ
- ಕೊಂಕಣಿ ಶಿಕ್ಷಕರ ಸಮಾವೇಶ, ಕೊಂಕಣಿ ಸಾಹಿತ್ಯ ಸಮ್ಮೇಳನ ಹಾಗೂ ಹಲವು ಸಂಘ ಸಂಸ್ಥೆಗಳೊಂದಿಗೆ ಕಾರ್ಯಕ್ರಮಗಳನ್ನು ನಿರ್ವಹಿಸಲಾಗಿದೆ.

5. ಕರ್ನಾಟಕ ಉರ್ದು ಭಾಷಾ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಂಗಳೂರು & 6. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ಸದರಿ ಅಕಾಡೆಮಿಗಳು ತಮ್ಮ ಅಕಾಡೆಮಿ ವ್ಯಾಪ್ತಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಶತಮಾನೋತ್ಸವಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ತರಬೇತಿ ಶಿಬಿರಗಳು, ಪ್ರಕಟಣೆ, ವಾರ್ಷಿಕ ಪ್ರಶಸ್ತಿ, ಪುಸ್ತಕ ಬಹುಮಾನಗಳು ಹೀಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.